ತೆರೆದ ಅಂಚೆ

# ನೀನಾಸಮ್ ಸಂಸ್ಕೃತಿ ಶಿಬಿರ

ಅಕ್ಟೋಬರ್ ೨೦೧೪

---

ಆಹ್ವಾನ

**ಶ್ರೀ/ಶ್ರೀಮತಿ**

**ಅವರಿಗೆ**

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

Ninasam, Heggodu, Sagara
Karnataka 577 417

not to be printed
2nd Cover

# ನೀನಾಸಮ್ ಸಂಸ್ಕೃತಿ ಶಿಬಿರ
# ಅಕ್ಟೋಬರ್ ೨೦೧೪

**ಸಂಸ್ಥಾಪಕ ನಿರ್ದೇಶಕರು: ಡಾ. ಯು.ಆರ್. ಅನಂತಮೂರ್ತಿ**

ಕಳೆದ ಎರಡು ದಶಕಗಳಿಗೂ ಮಿಕ್ಕು ನೀನಾಸಮ್ ನಡೆಸುತ್ತ ಬಂದಿರುವ ಸಂಸ್ಕೃತಿ ಶಿಬಿರಗಳ ೨೦೧೪ರ ಅವತರಣಿಕೆ ಇದು. ಈ ಬಾರಿಯ ಶಿಬಿರವು 'ಭಾರತೀಯ ಎನ್ನುವ ಒಂದು ಚಿಂತನಕ್ರಮ ಇದೆಯೆ ?' ಎಂಬ ವಿಚಾರವನ್ನು ಕೇಂದ್ರೀಕರಿಸುತ್ತದೆ. ಎ.ಕೆ. ರಾಮಾನುಜನ್ ಅವರ ಇದೇ ಹೆಸರಿನ ಲೇಖನಕ್ಕೆ ೨೫ ವರ್ಷ ತುಂಬಿದ್ದರ ನೆನಪಿಗೆ, ಆ ಬರಹವು ಎತ್ತಿದ ಪ್ರಸ್ತಾಪವನ್ನು ಇಂದಿನ ಸಂದರ್ಭದಲ್ಲಿ ಚರ್ಚಿಸುವುದು, ಮತ್ತು ಆ ಪ್ರಶ್ನೆಯನ್ನು ವಿಶಾಲಗೊಳಿಸಿ – ಭಾರತೀಯ ಎನ್ನುವ ಸಾಹಿತ್ಯ/ರಂಗಭೂಮಿ/ಸಂಗೀತ/ಸಿನೆಮಾ/ತಾತ್ತ್ವಿಕತೆ/ರಾಜಕಾರಣ – ಮೊದಲಾದವು ಇವೆಯೆ ? ಇದ್ದರೆ ಅವುಗಳ ಭಾರತೀಯ ಸ್ವರೂಪ ಎಂಥದು ? ಎಂಬಿತ್ಯಾದಿ ದಿಕ್ಕಿನಲ್ಲಿ ವಿಸ್ತರಿಸುವುದು ಪ್ರಸ್ತುತ ಶಿಬಿರದ ವಿಷಯ.

ಈ ವಿಷಯಕ್ಕೆ ಸಂಬಂಧಿಸಿ, ಹಲವು ಉಪನ್ಯಾಸ-ಚರ್ಚೆಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಶ್ರೀ ಗಿರೀಶ್ ಕಾರ್ನಾಡ್, ಶ್ರೀ ಚಂದ್ರಶೇಖರ ಕಂಬಾರ, ಶ್ರೀ ಮನು ಚಕ್ರವರ್ತಿ, ಶ್ರೀ ಶಿವ ವಿಶ್ವನಾಥನ್, ಶ್ರೀಮತಿ ಚಂದ್ರಿಕಾ ಪರಮಾರ್, ಶ್ರೀ ಟಿ.ಎಂ. ಕೃಷ್ಣ, ಶ್ರೀ ಗಿರೀಶ್ ಕಾಸರವಳ್ಳಿ, ಶ್ರೀಮತಿ ಸುಮಿತ್ರಾ ಭಾವೆ, ಶ್ರೀ ಸುನೀಲ್ ಸೂಕ್ತಂಕರ್, ಶ್ರೀ ಎಚ್.ಎಸ್. ವೆಂಕಟೇಶಮೂರ್ತಿ, ಶ್ರೀ ಅತುಲ್ ತಿವಾರಿ, ಶ್ರೀ ಗೋಪಾಲ ಗುರು, ಶ್ರೀ ಸುಂದರ ಸಾರುಕ್ಕೈ, ಶ್ರೀ ರಘುರಾಮ ರಾಜು, ಶ್ರೀ ರಾಹುಲ್ ದೇಶಪಾಂಡೆ, ಶ್ರೀ ಎಂ.ಕೆ. ರಾಘವೇಂದ್ರ, ಶ್ರೀ ಕೃಷ್ಣಮೂರ್ತಿ ಹನೂರು, ಶ್ರೀ ಓ.ಎಲ್. ನಾಗಭೂಷಣ ಸ್ವಾಮಿ, ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ, ಶ್ರೀಮತಿ ವೈದೇಹಿ, ಶ್ರೀ ಲಕ್ಷ್ಮೀಶ ತೋಳ್ಪಾಡಿ, ಶ್ರೀ ಜೆ.ಎಸ್. ಸದಾನಂದ, ಶ್ರೀ ವಿವೇಕ ಶಾನಭಾಗ, ಶ್ರೀ ಪ್ರಭಾಕರ ಜೋಷಿ, ಶ್ರೀ ಎಂ.ಎಸ್. ಶ್ರೀರಾಮ್, ಶ್ರೀ ರವಿಕುಮಾರ್ ಕಾಶಿ ಮೊದಲಾದವರು ಈ ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ.

ಚಿತ್ರಗ್ರಾಹಕರಾದ ಶ್ರೀ ಕೆ. ಎಸ್. ರಾಜಾರಾಮ್, ಶ್ರೀ ಎ.ಎನ್. ಮುಕುಂದ್ ಅವರ ನೇತೃತ್ವದಲ್ಲಿ ಪ್ರತಿದಿನ ಸಂಜೆ ಒಂದು ಫೋಟೋ ಪ್ರದರ್ಶನ ಹಾಗೂ ಛಾಯಾಗ್ರಹಣ ಕುರಿತು ಮುಂಜಾವಿನ ತರಗತಿಗಳು ನಡೆಯಲಿವೆ. ಶ್ರೀ ಚನ್ನಕೇಶವ, ಶ್ರೀ ವೀರೇಶ ಮೊದಲಾದವರು ರಂಗಕಲೆ ಕುರಿತು ಮುಂಜಾವಿನ ತರಗತಿಗಳನ್ನು ನಡೆಸಲಿದ್ದಾರೆ.

ಇವುಗಳಲ್ಲದೆ, ಸಂಜೆಯ ಸಾಂಸ್ಕೃತಿಕ ಉತ್ಸವದ ವಿವರಗಳು ಮುಂದಿನ ಪುಟಗಳಲ್ಲಿವೆ. ಇನ್ನು, ಪ್ರತಿವರ್ಷದಂತೆಯೇ ಶಿಬಿರದ ಹಗಲಿನ ಕಾರ್ಯಕ್ರಮಗಳ ಭಾಗವಾಗಿ ಸಾಹಿತ್ಯ-ನಾಟಕ-ಚಲನಚಿತ್ರ ಮಾಧ್ಯಮದ ಕೆಲವು ಪ್ರಾತ್ಯಕ್ಷಿಕೆಗಳು ಮತ್ತು ಪ್ರದರ್ಶನಗಳು ಕೂಡಾ ನಡೆಯಲಿದ್ದು ಅದರ ವಿವರಗಳೂ ಈ ಪುಸ್ತಿಕೆಯ ಕಡೆಯ ಪುಟದಲ್ಲಿವೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed
3rd Cover

# NINASAM CULTURE COURSE 2014

The Culture Course has been one of Ninasam's major annual events for the last 25 plus years. Held over 7 days every October, The Course is designed around a specific theme (this year, *Is There An Indian Way of Thinking?*), and organised as a combination of special lectures, lecture-demonstration-discussions on appreciation of art forms during the day-sessions, and a series of cultural programmes in the evenings. The evening festival this year consists of the following programmes:

- **2nd October, Thursday:** Ninasam Tirugata Performance - ***Namma Samsara;*** Directed by S. Raghunandana.
- **3rd October, Friday:** Ninasam Tirugata Performance - ***Uttara Ramacharita;*** translation of the Sanskrit play by Bannanje Govindacharya, Directed by B.R. Venkataramana Aithala.
- **4th October, Saturday:** Ninasam Play - ***Chirakumarasabha;*** Translation of Rabindranatha Tagore's play; Directed by Manjunatha L. Badigera.
- **5th October, Sunday:** Invited theatre performance ***Taoos Chaman Ki Maina*,** by Gilo Repertory Theatre, Mumbai; Dir. by Atul Tiwari.
- **6th October, Monday:** Karnatak Music Recital by **Vid. T.M. Krishna.**
- **7th October, Tuesday:** Hindustani Music Recital by **Pt. Rahul Deshpande.**
- **8th October, Wednesday:** Kathak dance performance by **Nandini K. Mehta and K. Murlimohan,** with thier group **Nadam Ensamble**, Bangalore.

**Ninasam, Heggodu, Sagara
Karnataka 577 417**

not to be printed

Page 1

## ಅಕ್ಟೋಬರ್ ೨ ಗುರುವಾರ

photo to be printed here
see cd for the photo with this file no.

**2CC14**

ತಿರುಗಾಟ ನಾಟಕ

# ನಮ್ಮ ಸಂಸಾರ

ರಘುನಂದನ ಅವರ 'ಶಿವಬಿಕ್ನು' ಮತ್ತು
ಒಂಚೆರಿ ನಾರಾಯಣ ಪಿಳ್ಳೆ ಅವರ 'ಬುದ್ಧಮಾಧವ'
ಕೃತಿಗಳ ಕೂಡುಪ್ರಯೋಗ

**ನಿರ್ದೇಶನ: ರಘುನಂದನ ಎಸ್.**

ಈ ಜೋಡು ಪ್ರಯೋಗದ ಮೊದಲನೆಯ ಭಾಗವಾದ ರಘುನಂದನರ 'ಶಿವಬಿಕ್ನು' ಎಂಬ ಆವಿದ್ಧ ಪದ್ಯನಾಟಕವು, ಇಂದಿನ ದಕ್ಷಿಣಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಅಂಚಿನಲ್ಲಿರುವ ಹಳ್ಳಿಯ ಕುಂಟುಂಬ ವೊಂದನ್ನು ಕೇಂದ್ರವಾಗಿಟ್ಟುಕೊಂಡಿದೆ. ಆ ಸಂಸಾರದಲ್ಲಿ ಆಸ್ತಿಯು ಪಾಲಾಗುವ ಹೊತ್ತಿಗೆ ಉದ್ಭವಿಸುವ ತಗಾದೆಯು, ದುರಂತದಲ್ಲಿ ಕೊನೆಗೊಳ್ಳುವುದನ್ನು ಕಾವ್ಯಾತ್ಮಕವಾಗಿ ನಾಟ್ಯೀಕರಿಸುವ ಕೃತಿ ಇದು. ಪ್ರಯೋಗದ ಎರಡನೆಯ ಭಾಗವು ಮಲಯಾಳಿ ನಾಟಕಕಾರ ಓಂಚೆರಿ ನಾರಾಯಣ ಪಿಳ್ಳೆ ಅವರ 'ದೈವಮ್ ವೀಂಡುಂ ತೆಟ್ಟಿಧರಿಕ್ಕುಜ್ಞು' ಎಂಬ ನಾಟಕವನ್ನಾಧರಿಸಿದ 'ಬುದ್ಧಮಾಧವ' ಎಂಬ ಕನ್ನಡ ರೂಪವನ್ನು ಆಧರಿಸಿದೆ. ಮಗುವೊಂದರ ಹೆರಿಗೆಯ ಹೊತ್ತಿನಲ್ಲಿ, ಮಗು ಹುಟ್ಟುವ ಮೊದಲೇ, ಹುಟ್ಟಲಿರುವ ಆ ಮಗುವಿನ ಮನೆತನದವರು ತೋರುವ, ಆಸ್ತಿ, ಅಂತಸ್ತು ಮತ್ತು ಹಣ ಸಂಪಾದನೆಯ ಪಿಪಾಸೆಯನ್ನು ಈ ನಾಟಕವು ವಿಡಂಬಿಸಿ ತೋರಿಸುತ್ತದೆ.

ಈ ನಾಟಕಗಳು ಎರಡು ಸಂಸಾರಗಳ ಕಥೆಯನ್ನು ಹೇಳಹೇಳುತ್ತಲೇ ಈವತ್ತಿನ ನಮ್ಮ ಜಗತ್ತು, ಜೀವನ ಮತ್ತು ಸಂಸಾರಕ್ಕೆ ಹತ್ತಿದ ಹಣದ ಭೂತಕ್ಕೆ ಕನ್ನಡಿ ಹಿಡಿಯುತ್ತವೆ. ಹಾಗಾಗಿ ಜಂಟಿ ನಾಟಕಗಳ ಈ ಪ್ರಯೋಗಕ್ಕೆ 'ನಮ್ಮ ಸಂಸಾರ' ಎಂಬ ಹೆಸರನ್ನು ಕೊಟ್ಟಿದೆ.

**ಸಂಜೆ ೭ ಗಂಟೆಗೆ**

not to be printed

Page 2

## ಅಕ್ಟೋಬರ್ ೩ ಶುಕ್ರವಾರ

photo to be printed here
see cd for the photo with this file no.

**3CC14**

ತಿರುಗಾಟ ನಾಟಕ

# ಉತ್ತರ ರಾಮಚರಿತ

ಭವಭೂತಿ ನಾಟಕದ ಕನ್ನಡಾನುವಾದ: ಬನ್ನಂಜೆ ಗೋವಿಂದಾಚಾರ್ಯ

**ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ**

ಭವಭೂತಿಯ ಉತ್ತರರಾಮಚರಿತ ನಾಟಕವು ಅನನ್ಯವಾದೊಂದು ದರ್ಶನ ಹಾಗು ಕಾವ್ಯಮೀಮಾಂಸೆಯನ್ನು ಮಂಡಿಸುವ ಕೃತಿ. ಕಥಾನಕದ ನೆಲೆಯಲ್ಲಿ ಈ ಕೃತಿಯು ವಾಲ್ಮೀಕಿಯನ್ನು ಅನುಸರಿಸಿದರೂ ಸನ್ನಿವೇಶ-ಸಂರಚನೆಗಳಲ್ಲಿ ಹೊಸಬಗೆಯ ಆವಿಷ್ಕಾರಗಳನ್ನು ರೂಪಿಸಿಕೊಂಡಿದೆ. ಮೊದಲ ಅಂಕದಲ್ಲಿ ರಾಮಾಯಣದ ಪೂರ್ವಕತೆಯ ಸನ್ನಿವೇಶಗಳನ್ನು ಚಿತ್ರದರ್ಶನದ ಮೂಲಕ ತೋರಿಸುವ ಕ್ರಮವು ಈ ನಾಟಕದ ತತ್ತ್ವ-ತಂತ್ರಗಳೆರಡಕ್ಕೂ ವಿಶಿಷ್ಟ ಬುನಾದಿಯನ್ನು ಹಾಕುತ್ತದೆ. ಎರಡನೆಯ ಅಂಕದ ಶಂಭೂಕವಧೆಯ ಪ್ರಸಂಗದಲ್ಲಿ ಈ ನಾಟಕವು ರಾಮನ ವ್ಯಕ್ತಿತ್ವದ ಇನ್ನೊಂದು ಬಗೆಯ ವ್ಯಾಖ್ಯಾನಕ್ಕೆ ತೊಡಗಿ ಆತನನ್ನು ಆತ್ಮವಿಮರ್ಶೆಗೆ ಒಡ್ಡುತ್ತದೆ. ಮೂರನೆಯ ಛಾಯಾಂಕದಲ್ಲಿ, ಬೇರೆಬೇರೆ ಬಗೆಯ ಅಸ್ತಿತ್ವ ಮತ್ತು ಅನುಭವ ಸ್ತರಗಳಲ್ಲಿರುವ ರಾಮಸೀತೆಯರು ಬಿಂಬಪ್ರತಿಬಿಂಬಗಳೋ ಎಂಬಂತೆ ಎದುರಾಗಿ ತಮ್ಮಿಬ್ಬರ ಶೋಕವನ್ನು ಕರುಣ ರಸವಾಗಿ ಪುನರಾವಿಷ್ಕರಿಸಿ ಕೊಳ್ಳುತ್ತಾರೆ. ಕಡೆಯ ಅಂಕದಲ್ಲಿ, ಒಂದು ನಾಟಕೀಯ ರಂಗಪ್ರಯೋಗದ ಮೂಲಕ ಹರಿದುಹಂಚಿಹೋದ ರಾಮನ ಕುಟುಂಬವು ಪರಸ್ಪರರನ್ನು ಗುರುತಿಸಿಕೊಳ್ಳುವುದರೊಂದಿಗೆ ಈ ನಾಟಕ ಮುಕ್ತಾಯಗೊಳ್ಳುತ್ತದೆ.

ಕರುಣ ಒಂದೆ ರಸ - ಎಂಬ ಪರಿಷ್ಕೃತ ಕಾವ್ಯಮೀಮಾಂಸೆಯ ತತ್ವವನ್ನು ತನ್ನ 'ಪರಿಣತ ಪ್ರಜ್ಞೆ'ಯ ಮೂಲಕ ಮಂಡಿಸುವ ಈ ಸಂಕೀರ್ಣ ನಾಟಕವನ್ನು ಇಂದಿನ ರಂಗಸಂದರ್ಭದಲ್ಲಿ ಹೇಗೆ ಆಡಬಹುದು ಮತ್ತು ನೋಡಬಹುದು ಎಂಬ ಕುತೂಹಲ ಪ್ರಸ್ತುತ ಪ್ರಯೋಗದ ಹಿಂದಿದೆ.

**ಸಂಜೆ ೭ ಗಂಟೆಗೆ**

not to be printed
Page 3

## ಅಕ್ಟೋಬರ್ ೪ ಶನಿವಾರ

photo to be printed here
see cd for the photo with this file no.

# 4CC14

ನೀನಾಸಮ್ ನಾಟಕ

## ಚಿರಕುಮಾರ ಸಭಾ

**ರವೀಂದ್ರನಾಥ ಠಾಕೂರ್ ಅವರ ನಾಟಕ ಆಧರಿಸಿದ**

**ಬಿ. ಪುಟ್ಟಸ್ವಾಮಯ್ಯನವರ ಕನ್ನಡರೂಪ**

**ವಿನ್ಯಾಸ, ನಿರ್ದೇಶನ: ಮಂಜುನಾಥ ಎಲ್. ಬಡಿಗೇರ**

ರವೀಂದ್ರನಾಥ ಠಾಕೂರರು ೧೯೨೫ರಲ್ಲಿ ನಾಟ್ಯ-ಕಾದಂಬರಿಯೆಂದು ರಚಿಸಿ, ಬಳಿಕ ಹಲವು ಭಾಷೆಗಳಲ್ಲಿ ಪ್ರಯೋಗಗೊಂಡು, ಸಿನೆಮಾ ಕೂಡ ಆಗಿ, ಪ್ರಸಿದ್ಧವಾಗಿರುವ ಕೃತಿಯ ಹೊಸ ಕನ್ನಡ ರಂಗರೂಪ ಈ ಪ್ರಯೋಗ.

೧೯ನೆಯ ಶತಮಾನದ ಕಲಕತ್ತೆಯಲ್ಲಿ ನಡೆಯುವ ಈ ನಾಟಕದ ಕಥೆಯು ಅವಿವಾಹಿತರ ಸಂಘವೊಂದನ್ನು ಕೇಂದ್ರವಾಗಿಟ್ಟುಕೊಂಡಿದೆ; ಮತ್ತು, ಅವಿವಾಹಿತರಾಗಿ ಉಳಿಯುವುದೇ ಆದರ್ಶವೆಂದು ವೈಭವೀಕರಿಸಲಾಗಿದ್ದ ಆ ಕಾಲದ ಕೆಲವು ವರ್ಗಗಳ ನಂಬಿಕೆಯನ್ನು ವಿಡಂಬಿಸುತ್ತದೆ. ಆ ಅವಿವಾಹಿತರ ಸಂಘದೊಳಗೆ ಉಂಟಾಗುವ ಬದಲಾವಣೆಗಳ ಕಾರಣದಿಂದಾಗಿ ಹೆಂಗಸರೂ ಆ ಸಂಘದ ಸದಸ್ಯರಾಗುವುದು, ಮತ್ತು ಪರಿಣಾಮವಾಗಿ ಅಲ್ಲಿಯ ಅವಿವಾಹಿತರು ಪ್ರೀತಿಯ ಬೆನ್ನುಹತ್ತುವುದು – ಇದು ಈ ನಾಟಕದ ವಿಡಂಬನೆಯ ಮುಖ್ಯ ಎಳೆ. ತಾತ್ವಿಕ ಆದರ್ಶಗಳ ಬೆನ್ನುಹತ್ತಿ, ಕೃತಕ ಸಿದ್ಧಾಂತಗಳ ಅಡಿಯಲ್ಲಿ ಒದ್ದಾಡುವುದಕ್ಕಿಂತ, ವಾಸ್ತವದ ಅರಿವುಳ್ಳ ಮಾನವೀಯತೆಯನ್ನು ಸಂಪಾದಿಸುವುದೇ ಒಂದು ಕುಟುಂಬಕ್ಕೂ ರಾಷ್ಟ್ರಕ್ಕೂ ಹೆಚ್ಚು ಆರೋಗ್ಯಕರವೆಂಬ ವಿಶಾಲ ದರ್ಶನವನ್ನು ಒಂದು ವಿಶಿಷ್ಟ ರೂಪಕದ ಮೂಲಕ ನಮ್ಮೆದುರು ಮಂಡಿಸುವ ಕೃತಿ ಇದು.

ಹೆಗ್ಗೋಡು ಸುತ್ತಮುತ್ತಲಿನ ನೀನಾಸಮ್ ಬಳಗವು ವರ್ಷಕ್ಕೊಮ್ಮೆ ಕೂಡಿ ತಯಾರಿಸುವ ನಾಟಕಸರಣಿಯಲ್ಲಿ ಬಂದ ೨೦೧೪ರ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be printed
Page 4

## ಅಕ್ಟೋಬರ್ ೫ ಭಾನುವಾರ

photo to be printed here
see cd for the photo with this file no.

# 5CC14

ಆಹ್ವಾನಿತ ಹಿಂದುಸ್ತಾನಿ ಭಾಷೆಯ ರಂಗಪ್ರಯೋಗ

## ತಾವೂಸ್ ಚಮನ್ ಕೀ ಮೈನಾ

ಮುಂಬಯಿಯ ಗಿಲೋ ಥಿಯೇಟರ್ ರೆಪರ್ಟರಿ ತಂಡದಿಂದ

**ನಿರ್ದೇಶನ: ಅತುಲ್ ತಿವಾರಿ**

ಹಲವರ್ಷಗಳಿಂದ ಕಿರಿಯ ಪ್ರೇಕ್ಷಕರನ್ನೇ ಗಮನದಲ್ಲಿಟ್ಟುಕೊಂಡು, ಅವರಿಗೂ ದೊಡ್ಡವರಿಗೂ ಸಲ್ಲುವಂತೆ ಭಾರತೀಯ ವಸ್ತು-ಕಥನಗಳನ್ನುಳ್ಳ ಬಗೆಬಗೆಯ ರಂಗಪ್ರಯೋಗಗಳನ್ನು ರೂಪಿಸುತ್ತಿರುವ ಮುಂಬಯಿಯ ತಂಡ - ಗಿಲೋ ಥೇಟರ್ ರೆಪರ್ಟರಿ. ಈ ತಂಡದ ಪ್ರಸ್ತುತ ಪ್ರಯೋಗವು ಭಾರತದ ಹಲವು ಪ್ರತಿಷ್ಠಿತ ಉತ್ಸವಗಳಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿದೆ.

ಪರ್ವತಪ್ರಾಂತ್ಯದಿಂದ ತಂದ, ಮಾತಾಡುವ ಮೈನಾ ಹಕ್ಕಿಗಳನ್ನು ಸಾಕಲು ಲಖನೌ ನಗರದ ರಾಜೋದ್ಯಾನದಲ್ಲಿ ಬೃಹತ್ ಗಾತ್ರದ ಒಂದು ಪಂಜರವನ್ನು ನಿರ್ಮಿಸಲಾಗಿದೆ; ಕಾಲೇ ಖಾನ್ ಈ ಪಂಜರ ಮತ್ತು ಪಕ್ಷಿಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿದ್ದಾನೆ. ಆದರೆ, ಈತನಿಗೊಬ್ಬಳು ತಾಯಿಲ್ಲದ ಮಗಳಿದ್ದಾಳೆ; ಅವಳಿಗೆ ಈ ಹಕ್ಕಿಗಳಲ್ಲಿ ಒಂದನ್ನು ಪಡೆಯುವ ಬಯಕೆಯಾಗಿದೆ. ಕಾಲೇ ಖಾನ್ ಅವಳಿಗಾಗಿ ಒಂದು ಮೈನಾ ಹಕ್ಕಿಯನ್ನು ಕದಿಯುವುದರಿಂದ ಏನೆಲ್ಲ ಘಟನಾಪರಂಪರೆ ಸಂಭವಿಸುತ್ತದೆ ಎಂಬುದನ್ನು ಈ ನಾಟಕವು ಬಿಚ್ಚಿಡುತ್ತ ಹೋಗುತ್ತದೆ.

ನಯ್ಯರ್ ಮಸೂದ್ ಅವರ ಉರ್ದು ಕಥೆಯನ್ನಾಧರಿಸಿ ಅತುಲ್ ತಿವಾರಿ ಅವರು ರಚಿಸಿರುವ ಈ ನಾಟಕದಲ್ಲಿ ನಜೀರ್ ಅಕ್ಬರಾಬಾದಿ ಮತ್ತು ಅತುಲ್ ತಿವಾರಿ ಅವರ ಹಾಡುಗಳಿವೆ; ಅಮೋದ ಭಟ್ ಈ ಹಾಡುಗಳಿಗೆ ಸಂಗೀತ ನೀಡಿದ್ದಾರೆ; ಎಂ.ಎಸ್. ಸತ್ಯು ವಿನ್ಯಾಸ ಮಾಡಿದ್ದಾರೆ. ಮತ್ತು, ೨೫ಕ್ಕೂ ಹೆಚ್ಚು ಜನ ಹಿರಿಕಿರಿಯ ನಟರು ಪ್ರಯೋಗದಲ್ಲಿ ಪಾಲ್ಗೊಂಡಿದ್ದಾರೆ.

**ಸಂಜೆ ೭ ಗಂಟೆಗೆ**

not to be printed
Page 5

## ಅಕ್ಟೋಬರ್ ೬ ಸೋಮವಾರ

photo to be printed here
see cd for the photo with this file no.

**6CC14**

ಕರ್ನಾಟಕ ಸಂಗೀತ ಗಾಯನ

## ವಿ। ಟಿ.ಎಂ. ಕೃಷ್ಣ

ಚೆನ್ನೈ ಮತ್ತು ಸಹಕಲಾವಿದರಿಂದ

ತಮ್ಮ ವಿದ್ವತ್ಪೂರ್ಣ ಪ್ರಸ್ತುತಿ, ಶಾರೀರಸಂಪದ ಮತ್ತು ಸತತ ಆವಿಷ್ಕಾರಗಳ ಮೂಲಕ ಕರ್ನಾಟಕ ಸಂಗೀತದ ಗಾಯಕರಲ್ಲಿ ಇಂದು ಅತ್ಯಂತ ಪ್ರಸಿದ್ಧ ಕಲಾವಿದರಲ್ಲೊಬ್ಬರಾಗಿ ಬೆಳೆದವರು ವಿ। ಟಿ.ಎಂ. ಕೃಷ್ಣ. ತಮ್ಮ ಎಳೆಯ ವಯಸ್ಸಿನಲ್ಲಿಯೇ ವಿ। ಬಿ. ಸೀತಾರಾಮ ಶರ್ಮ ಅವರಿಂದ ಸಂಗೀತ ಶಿಕ್ಷಣ ಪಡೆಯಲಾರಂಭಿಸಿದ ಕೃಷ್ಣ ಅವರು ಮುಂದೆ ಕರ್ನಾಟಕ ಸಂಗೀತ ಸಂಪ್ರದಾಯದ ದಿಗ್ಗಜರೆನ್ನಿಸಿಕೊಂಡ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರ ಶಿಷ್ಯರಾಗಿ ಹಲವು ವರ್ಷ ಅಭ್ಯಾಸ ಮಾಡಿದರು.

ಕಳೆದ ಹತ್ತಾರು ವರ್ಷಗಳಿಂದೀಚೆಗೆ ದೇಶವಿದೇಶಗಳ ಹಲವು ಪ್ರಸಿದ್ಧ ಸಂಗೀತಸಭೆಗಳಲ್ಲಿ ಕಾರ್ಯಕ್ರಮ ನೀಡುತ್ತ ಬಂದಿರುವ ವಿ। ಕೃಷ್ಣ ಅವರು ಸಂಗೀತದ ಬಗ್ಗೆ ಸಂಶೋಧನೆ ಮತ್ತು ಬರವಣಿಗೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯೂ ಕೂಡಿದಂತೆ ಹಲವಾರು ಗಣ್ಯ ಪುರಸ್ಕಾರಗಳು ಇವರಿಗೆ ಸಂದಿವೆ. ಇವರ ಗಾಯನದ ಹಲವಾರು ಧ್ವನಿಮುದ್ರಣಗಳು ಮತ್ತು ಸಂಗೀತ ಕುರಿತ ಇವರ ಹಲವು ಬರಹಗಳು ಈಗಾಗಲೇ ಪ್ರಕಟಗೊಂಡಿವೆ. ಕರ್ನಾಟಕ ಸಂಗೀತ ಪ್ರಕಾರದ ಇತಿಹಾಸ, ಸ್ವರೂಪ ಮತ್ತು ಸಮಾಜದೊಂದಿಗೆ ಅದರ ಸಂಬಂಧ ಕುರಿತಂತೆ ಅವರ ಬರಹಗಳು ವಿಶೇಷವಾದ ಬೆಳಕು ಚೆಲ್ಲುವಂತಿವೆ. ಕರ್ನಾಟಕ ಸಂಗೀತಕ್ಷೇತ್ರದೊಳಕ್ಕೆ ಯುವ ಮತ್ತು ಗ್ರಾಮೀಣ ಪ್ರತಿಭೆಗಳನ್ನು ಆಕರ್ಷಿಸುವ ಮತ್ತು ಅವರನ್ನು ತರಬೇತುಗೊಳಿಸುವ ಗುರಿಯಿಟ್ಟುಕೊಂಡು ಇವರು ಪ್ರಸ್ತುತ ಹಲವು ಬಗೆಯ ಕಾರ್ಯಯೋಜನೆಗಳನ್ನು ನಡೆಸುತ್ತಿದ್ದಾರೆ.

**ಸಂಜೆ ೭ ಗಂಟೆಗೆ**

not to be printed
Page 6

## ಅಕ್ಟೋಬರ್ ೭ ಮಂಗಳವಾರ

photo to be printed here
see cd for the photo with this file no.

**7CC14**

ಹಿಂದುಸ್ತಾನಿ ಗಾಯನ

## ಪಂ। ರಾಹುಲ್ ದೇಶಪಾಂಡೆ

ಪುಣೆ ಮತ್ತು ಸಹಕಲಾವಿದರಿಂದ

ಮರಾಠಿ ನಾಟ್ಯಸಂಗೀತದ ಪ್ರಸಿದ್ಧ ಕಲಾವಿದ ಮತ್ತು ಹಿಂದುಸ್ತಾನಿ ಸಂಗೀತದ ಆಚಾರ್ಯ ದಿ. ಪಂ। ವಸಂತರಾವ್ ದೇಶಪಾಂಡೆ ಅವರ ಮೊಮ್ಮಗನಾದ ಪಂ। ರಾಹುಲ್ ದೇಶಪಾಂಡೆಯವರು ಇಂದಿನ ಪ್ರಸಿದ್ಧ ಯುವ ಗಾಯಕರಲ್ಲೊಬ್ಬರು. ಗಂಗಾಧರ ಬುವಾ ಪಿಂಪಲಖರೆ, ಮಧುಸೂದನ ಪಟವರ್ಧನ್ ಮತ್ತು ಶ್ರೀಮತಿ ಉಷಾತಾಯಿ ಚಿಪಲ್ಕಟ್ಟಿ ಮೊದಲಾದ ಗುರುಗಳೊಂದಿಗೆ ಸಂಗೀತಾಭ್ಯಾಸ ಆರಂಭಿಸಿದ ರಾಹುಲ್ ದೇಶಪಾಂಡೆ ತಮ್ಮ ವಿಶಿಷ್ಟ ಗಾಯನಶೈಲಿಯನ್ನು ಕಂಡುಕೊಂಡಿದ್ದು ದಿ. ಕುಮಾರ ಗಂಧರ್ವ ಅವರ ಪುತ್ರರಾದ ಮುಕುಲ್ ಶಿವಪುತ್ರ ಅವರ ತರಬೇತಿಯಲ್ಲಿ. ಶಾಸ್ತ್ರೀಯ ಗಾಯನದ ಜತೆಗೆ ಅಭಂಗ, ಠುಮ್ರಿ ಮತ್ತು ನಾಟ್ಯಸಂಗೀತಗಳಲ್ಲೂ ಪರಿಣತಿ ಪಡೆದಿರುವ ಇವರು ಸಾಂಪ್ರದಾಯಿಕ ಮರಾಠಿ ಸಂಗೀತನಾಟಕಗಳಲ್ಲಿ ಪಾತ್ರ ವಹಿಸಿದ್ದಾರೆ; ಪ್ರಸಿದ್ಧ ಮರಾಠಿ ಚಲನಚಿತ್ರ ಬಾಲಗಂಧರ್ವದಲ್ಲಿ ಮುಖ್ಯಪಾತ್ರವೊಂದನ್ನು ನಿರ್ವಹಿಸಿದ್ದಾರೆ.

ಭಾರತಾದ್ಯಂತ ಹಲವು ಸಂಗೀತೋತ್ಸವಗಳಲ್ಲಿ ಪಾಲ್ಗೊಂಡಿರುವ ದೇಶಪಾಂಡೆ ಅವರು ಅಮೇರಿಕಾ, ಇಂಗ್ಲೆಂಡ್, ಸಿಂಗಾಪುರ, ಆಸ್ಟ್ರೇಲಿಯಾ ಮೊದಲಾದೆಡೆ ಕಾರ್ಯಕ್ರಮ ನೀಡಿದ್ದಾರೆ. ಬಾಲಗಂಧರ್ವ ಪುರಸ್ಕಾರ, ಕುಮಾರ ಗಂಧರ್ವ ಪುರಸ್ಕಾರ, ಪು.ಲ. ದೇಶಪಾಂಡೆ ಸನ್ಮಾನ, ಸುಧೀರ್ ಫಾಡ್ಕೆ ಪುರಸ್ಕಾರ ಮೊದಲಾದ ಹಲವು ಮನ್ನಣೆಗಳು ಅವರಿಗೆ ಸಂದಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಹಕಲಾವಿದರು–ಶ್ರೀ ಚೈತನ್ಯ ಕುಂಠೆ (ಹಾರ್ಮೋನಿಯಮ್), ಶ್ರೀ ನಿಖಿಲ್ ಫಾಠಕ್ (ತಬಲಾ).

**ಸಂಜೆ ೭ ಗಂಟೆಗೆ**

not to be printed

Page 7

## ಅಕ್ಟೋಬರ್ ೮ ಬುಧವಾರ

photo to be printed here
see cd for the photo with this file no.

**8CC14**

ಶಾಸ್ತ್ರೀಯ ಕಥಕ್ ನೃತ್ಯ

ನಂದಿನಿ ಕೆ.ಮೆಹತಾ ಮತ್ತು ಕೆ. ಮುರಳಿಮೋಹನ್ ನೇತೃತ್ವದ

# ನಾದಮ್, ಬೆಂಗಳೂರು

ತಂಡದ ಕಲಾವಿದರಿಂದ

ಭಾರತೀಯ ನೃತ್ಯಪ್ರಕಾರಗಳನ್ನು ಕಲಿಸುವ ಮತ್ತು ಅವುಗಳಲ್ಲಿ ಕ್ರಿಯಾಶೀಲ ಪ್ರಯೋಗ-ಪ್ರದರ್ಶನಗಳನ್ನೂ ನಡೆಸುವ ಚಟುವಟಿಕೆಗಳಲ್ಲಿ ತೊಡಗಿರುವ ಬೆಂಗಳೂರಿನ ನಾದವ್ (ನರ್ತನ ಅಕಾಡೆಮಿ ಆಫ್ ಡಾನ್ಸ್ ಎಂಡ್ ಮ್ಯೂಸಿಕ್) ಸಂಸ್ಥೆಯು ಒಂದು ನೃತ್ಯಶಾಲೆಯನ್ನು ನಡೆಸುವುದರ ಜೊತೆಗೆ ಕಳೆದ ಕೆಲವು ವರ್ಷಗಳಿಂದ ಬೆಂಗಳೂರಿನಲ್ಲಿ 'ಕಲಾ ನಾದಮ್' ಎಂಬ ಹೆಸರಿನ ಒಂದು ಪ್ರತಿಷ್ಠಿತ ನೃತ್ಯೋತ್ಸವವನ್ನೂ ಆಯೋಜಿಸುತ್ತಿದೆ.

ಈ ತಂಡದ ಗುರುಗಳಾದ ನಂದಿನಿ ಕೆ. ಮೆಹತಾ ಮತ್ತು ಕೆ. ಮುರಳಿಮೋಹನ್ ಅವರು ಗರುಗಳಾದ ಚಂದ್ರಭಾಗಾ ದೇವಿ, ಯು.ಎಸ್. ಕೃಷ್ಣರಾವ್, ಮಾಯಾ ರಾವ್, ಚಿತ್ರಾ ವೇಣುಗೋಪಾಲ್, ಕುಮುದಿನಿ ಲಾಖಿಯಾ ಮೊದಲಾದ ಭಾರತೀಯ ನೃತ್ಯಲೋಕದ ಹಲವು ಪ್ರಸಿದ್ಧರ ಬಳಿ ಅಭ್ಯಾಸ ಮಾಡಿದವರು. ದೇಶವಿದೇಶಗಳಲ್ಲಿ ಅವರಿಬ್ಬರ ಪ್ರದರ್ಶನಗಳು ನಡೆದಿವೆ; ಬೇರೆಬೇರೆ ದೇಶಗಳ ಬಹುಸಂಖ್ಯೆಯ ವಿದ್ಯಾರ್ಥಿಗಳನ್ನು ಅವರಿಬ್ಬರು ತರಬೇತಿಗೊಳಿಸಿದ್ದಾರೆ. ಕಲಾರಥಿರತ್ನ, ಗುಣನಿಧಿ, ನೃತ್ಯನಿಪುಣ ಮೊದಲಾಗಿ ನಾಡಿನ ಹಲವಾರು ಪ್ರಶಸ್ತಿಗಳನ್ನು ಅವರು ಪಡೆದಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನೃತ್ಯ ಕಲಾವಿದರು - ನಂದಿನಿ ಕೆ. ಮೆಹತಾ, ಕೆ. ಮುರಳಿಮೋಹನ್, ಸ್ಮಿತಾ ಶ್ರೀನಿವಾಸನ್, ಮಿತಾ ವಿನಯ್, ಸಮನ್ವಿತಾ ಶರ್ಮ, ಅರ್ಪಿತಾ ಬ್ಯಾನರ್ಜಿ, ಚಂದನಾ ರಮೇಶ್, ಸೌಮ್ಯ ರವಿ, ಮಾಲವಿಕಾ ಶ್ರೀಪಾದ, ತನ್ವಿ ಎಲ್. ಮತ್ತು ಚೇತನಾ ಎ.ಸಿ.

**ಸಂಜೆ ೭ ಗಂಟೆಗೆ**

not to be printed

Page 8

## ಹಗಲಿನ ಪ್ರಾತ್ಯಕ್ಷಿಕೆ-ಪ್ರದರ್ಶನಗಳು

ದಿನಾಂಕ ೩ ಶುಕ್ರವಾರ - ಮಧ್ಯಾಹ್ನ ೨.೩೦ಕ್ಕೆ
**ಕಥಾಪ್ರಸ್ತುತಿ - ಮಾಸ್ತಿ ಕಥೆ - ಇಲ್ಲಿಯ ತೀರ್ಪು**
ಆದ್ಯಂತ ನಾಟ್ಯ ಪ್ರಯೋಗಶಾಲೆ ತಂಡದವರಿಂದ
ನಿರ್ದೇಶನ: ಮೌನೇಶ ಬಡಿಗೇರ

---

ದಿನಾಂಕ ೪ ಶನಿವಾರ - ಮಧ್ಯಾಹ್ನ ೨.೩೦ಕ್ಕೆ
**ಚಿತ್ರಕಥೀ**
ಮರಾಠಿ ಸಾಂಪ್ರದಾಯಿಕ ರಂಗಪ್ರಸ್ತುತಿ
ಶ್ರೀ ಗಣಪತ್ ಮಸಗೆ ಮತ್ತು ತಂಡ
ಅವರಿಂದ

---

ದಿನಾಂಕ ೫ ಭಾನುವಾರ - ಮಧ್ಯಾಹ್ನ ೨.೩೦ಕ್ಕೆ
**ವೈದೇಹಿ ಕಥಾ ಪ್ರಸ್ತುತಿ - ಕ್ರೌಂಚ ಪಕ್ಷಿಗಳು**
ಸುಶೀಲಾ ಎಂ.ಪಿ., ವಿದ್ಯಾ ಹೆಗಡೆ ಮತ್ತು ಶೈಲಜಾ ಪ್ರಕಾಶ್
ಅವರಿಂದ
ನಿರ್ದೇಶನ: ಅಕ್ಷರ ಕೆ.ವಿ.

---

ದಿನಾಂಕ ೬ ಸೋಮವಾರ - ಮಧ್ಯಾಹ್ನ ೪ಕ್ಕೆ
**ನೃತ್ಯಪ್ರಸ್ತುತಿ - ಎನ್.ಎಚ್. ೭**
ಎನ್.ಎಚ್, ೭ ಡಾನ್ಸ್ ಟ್ರಿಯೋ ತಂಡದವರಿಂದ
ತಂಡ: ಅಮರೇಶ ಕೆ., ಚರಣ ಸಿ.ಎಸ್, ದೀಪಕ್ ಕುರ್ಕಿ ಶಿವಸ್ವಾಮಿ
ನೃತ್ಯಯೋಜನೆ: ದೀಪಕ್ ಕುರ್ಕಿ ಶಿವಸ್ವಾಮಿ

---

ದಿನಾಂಕ ೭ ಮಂಗಳವಾರ - ಮಧ್ಯಾಹ್ನ ೨.೩೦ಕ್ಕೆ
**ಮರಾಠಿ ಚಲನಚಿತ್ರ**
**ವಾಸ್ತುಪುರುಷ್**
ನಿರ್ದೇಶನ: ಶ್ರೀಮತಿ ಸುಮಿತ್ರಾ ಭಾವೆ,
ಶ್ರೀ ಸುನೀಲ್ ಸೂಕ್ತಂಕರ್

---

ದಿನಾಂಕ ೮ ಬುಧವಾರ - ಬೆಳಿಗ್ಗೆ ೯.೩೦ಕ್ಕೆ
**ಸಂಗೀತ ಪ್ರಾತ್ಯಕ್ಷಿಕೆ**
ಪಂ। ರಾಹುಲ್ ದೇಶಪಾಂಡೆ
ಅವರಿಂದ

**ಈ ಕಾರ್ಯಕ್ರಮಗಳು ಶಿಬಿರದ ಉಪನ್ಯಾಸಗಳಿಗೆ ಪೂರಕವಾಗಿ ಏರ್ಪಾಟಾಗಿರುವ ಪ್ರಾತ್ಯಕ್ಷಿಕೆಗಳಾಗಿರುವುದರಿಂದ ಅದರ ದಿನಾಂಕ ಮತ್ತು ಸಮಯದಲ್ಲಿ ಬದಲಾವಣೆ ಆಗುವ ಸಾಧ್ಯತೆ ಇರುತ್ತದೆ; ಪ್ರವೇಶಾವಕಾಶ ಸೀಮಿತ.**